StudentBounty.com

**Third Semester Three Year LL.B. Examination, January 2011**
**CRIMINAL LAW – II**
**Criminal Procedure Code, JJ Act and Probation of Offender Act**
**(Course – III)**

Duration : 3 Hours                                                  Max. Marks : 100

**Instructions** : 1. Answer all **five (5)** questions.
2. Answer one essay type and one short note question or problem from each unit.
3. Figures to the right indicate marks.
4. Answers should be written **either** in English or Kannada **completely**.

**UNIT – I**

Q. No. 1. (a) Examine the procedure for recording First Information Report (FIR). Discuss the evidentiary value of FIR and the effect of delay in lodging the FIR.

ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಳ್ಳುವ ಪ್ರಕ್ರಿಯೆಯನ್ನು ಪರಿಶೀಲಿಸಿ. ಪ್ರಥಮ ವರ್ತಮಾನ ವರದಿಯ ಸಾಕ್ಷ್ಯ ಮೌಲ್ಯವನ್ನು ಮತ್ತು ವಿಳಂಬವಾಗಿ ಸಲ್ಲಿಸಿದ ಪ್ರಥಮ ವರ್ತಮಾನ ವರದಿಯ ಪರಿಣಾಮವನ್ನು ಚರ್ಚಿಸಿ.

OR/**ಅಥವಾ**

State the circumstances under which the police officer can arrest a person without warrant. Marks : 15

ಯಾವ ಸಂದರ್ಭಗಳಲ್ಲಿ ಒಬ್ಬ ಪೊಲೀಸು ಅಧಿಕಾರಿಯು ಬಂಧನದ ಆದೇಶ (ವಾರಂಟ್) ಇಲ್ಲದೆ ದಸ್ತಗಿರಿ ಮಾಡ ಬಹುದು, ಎಂದು ತಿಳಿಸಿ.

(b) State the sentences which may be passed by the different courts having criminal jurisdiction under the code.

ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಅಪರಾಧದ ವಿಚಾರಣೆ ವ್ಯಾಪ್ತಿಯನ್ನು ಹೊಂದಿರುವ ವಿವಿಧ ನ್ಯಾಯಾಲಯಗಳು ನೀಡಬಹುದಾದ ಶಿಕ್ಷೆಯ ಬಗ್ಗೆ ತಿಳಿಸಿ.

OR/**ಅಥವಾ**

Explain the provisions of cr.p.c. relating to summary trials. Marks : 5

ದಂಡ ಪ್ರಕ್ರಿಯಾ ಸಂಹಿತೆಯ ಸಂಕ್ಷಿಪ್ತ ಆರೋಪಗಳ ವಿಚಾರಣೆಗೆ ಸಂಬಂಧಿಸಿದ ಉಪ ಬಂಧಗಳನ್ನು ಕುರಿತು ಬರೆಯಿರಿ.

**P.T.O.**

www.StudentBounty.com

## UNIT – II

Q. No. 2. (a) Discuss the provisions relating to bail in non-bailable offences.

ಜಾಮಿನಿಯವಲ್ಲದ ಅಪರಾಧಗಳಿಗೆ ಜಾಮೀನು ಸಂಬಂಧ ಇರುವ ಉಪಬಂಧಗಳನ್ನು ಚರ್ಚಿಸಿ.

OR/ಅಥವಾ

Explain the provisions of Cr.PC relating to proclamation and attachment — Marks : 15

ಉದ್ಘೋಷಣೆ ಮತ್ತು ಜಪ್ತಿಗೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳನ್ನು ವಿವರಿಸಿ.

(b) 'A' is accused of a theft on one occasion and causing grievous hurt on another occasion. Can 'A' be charged and tried in one trial ? Give reasons.

'A' ಎನ್ನುವವನು ಒಂದು ಸಂದರ್ಭದಲ್ಲಿ ಕಳ್ಳತನವನ್ನು ಮಾಡಿದ್ದಾನೆ ಮತ್ತು ಇನ್ನೊಂದು ಸಂದರ್ಭದಲ್ಲಿ ತೀವ್ರಗಾಯವನ್ನು ಮಾಡಿದ್ದಾನೆ, ಎಂದು ಆರೋಪಿಸಲಾಗಿದೆ. 'A' ಯ ಮೇಲೆ ಈ ಬಗ್ಗೆ ಆರೋಪ ರಚನೆಯನ್ನು ಮತ್ತು ಆರೋಪದ ವಿಚಾರಣೆಯನ್ನು ನ್ಯಾಯಾಲಯ ಒಂದೇ ವಿಚಾರಣೆಯಲ್ಲಿ ಕೈಗೆತ್ತಿ ಕೊಳ್ಳಬಹುದೇ ? ಕಾರಣ ಸಹಿತ ತಿಳಿಸಿ.

OR/ಅಥವಾ

A court of Judicial Magistrate of Firstclass issues a warrant of arrest directing the police to arrest the proprietor of a firm without mentioning the name or description of the proprietor. Is the warrant of arrest valid ? Give reasons. — Marks : 5

ಒಂದು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯವು ಒಂದು ಫರ್ಮ್‌ನ ಮಾಲಿಕನನ್ನು ಬಂಧಿಸಲು ಆತನ ಹೆಸರು ಅಥವಾ ವಿವರವನ್ನು ನಮೂದಿಸದೆ ಒಂದು ಬಂಧನದ ಆದೇಶವನ್ನು ಹೊರಡಿಸುತ್ತದೆ. ಬಂಧನದ ಆದೇಶ ಸಿಂಧುವೇ ? ಕಾರಣ ತಿಳಿಸಿ.

## UNIT – III

Q. No. 3. (a) Examine the applicability of the principle of Double Jeopardy under Cr.PC.

ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಇಮ್ಮಡಿ ವಿಪತ್ತಿನ ತತ್ವದ ಅನ್ವಯಿಕೆಯನ್ನು ಪರಿಶೀಲಿಸಿ.

OR/ಅಥವಾ

Explain the scope of maintenance to wife, children and parents under Cr.PC. State the circumstances under which maintenance once granted could be altered. — Marks : 15

ಹೆಂಡತಿ, ಮಕ್ಕಳು ಮತ್ತು ಹೆತ್ತವರಿಗೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಉಲ್ಲೇಖಿಸಿರುವ ಜೀವನಾಂಶದ ವ್ಯಾಪ್ತಿಯನ್ನು ವಿವರಿಸಿ. ಯಾವ ಸಂದರ್ಭಗಳಲ್ಲಿ ಒಮ್ಮೆ ಕೊಟ್ಟ ಜೀವನಾಂಶವನ್ನು ಬದಲಾಯಿಸಬಹುದು.

StudentBounty.com

www.StudentBounty.com

(b) The Executive Magistrate initiates proceedings against two hostile groups under section 107 of Cr.PC. The hostile parties proceeded against are bound over in the same proceeding. Is exercise of power by the executive magistrate sustainable ? Decide giving reasons.

ಕಾರ್ಯಾಂಗ ದಂಡಾಧಿಕಾರಿಯು ಎರಡು ಸಂಘರ್ಷ ಗುಂಪುಗಳ ವಿರುದ್ಧ ದಂಡಪ್ರಕ್ರಿಯಾ ಸಂಹಿತೆಯ 107 ಕಲಂನ ವ್ಯಾಪ್ತಿಯಲ್ಲಿ ಕಾನೂನಿನ ವ್ಯವಹರಣೆಯನ್ನು ಕೈಗೊಳ್ಳುತ್ತಾರೆ. ಕಾನೂನಿನ ವ್ಯವಹರಣೆಗೆ ಒಳಪಟ್ಟ ಎರಡೂ ಸಂಘರ್ಷ ಗುಂಪುಗಳಿಂದ ಒಂದೇ ವ್ಯವಹರಣೆಯಲ್ಲಿ ಮುಚ್ಚಳಿಕೆಯನ್ನು ತೆಗೆದು ಕೊಳ್ಳುತ್ತಾರೆ. ಕಾರ್‍ಯಾಂಗ ದಂಡಾಧಿಕಾರಿ ಅಧಿಕಾರ ಚಲಾವಣೆ ಕಾನೂನು ಸಮ್ಮತವಾಗಿದೆಯೇ ? ಕಾರಣ ಸಹಿತ ತಿಳಿಸಿ.

OR/**ಅಥವಾ**

A case is committed to Judicial Magistrate of First class for trial by a Sessions Court under S-307 of Cr.PC which court has the jurisdiction and power that could tender pardon to the accused ? Decide giving reasons. Marks : 5

ಒಂದು ಮೊಕದ್ದಮೆಯನ್ನು ಅಧಿವಿಚಾರಣೆಗೋಸ್ಕರ ಸತ್ರ ನ್ಯಾಯಾಲಯವು ಪ್ರಥಮದರ್ಜೆ ನ್ಯಾಯಿಕ ದಂಡಾಧಿಕಾರಿಯ ನ್ಯಾಯಾಲಯಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 307ರ ಪ್ರಕಾರ ಕಳುಹಿಸುತ್ತದೆ. ಆರೋಪಿಗೆ ಕ್ಷಮಾದಾನ ನೀಡುವರೇ ಯಾವ ನ್ಯಾಯಾಲಯ ವ್ಯಾಪ್ತಿ ಮತ್ತು ಅಧಿಕಾರವನ್ನು ಹೊಂದಿದೆ ? ಕಾರಣ ಸಹಿತ ನಿರ್ಧರಿಸಿ.

## UNIT – IV

Q. No. 4. (a) Discuss the powers of the Supreme Court and High Courts to transfer cases and appeals.

ಧಾವೆಗಳ ಮತ್ತು ಮೇಲ್ಮನವಿಗಳ ವರ್ಗಾವಣೆಯ ವಿಷಯದಲ್ಲಿ ಸರ್ವೋಚ್ಚನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯಗಳಿಗೆ ಇರುವ ಅಧಿಕಾರವನ್ನು ಚರ್ಚಿಸಿ.

OR/**ಅಥವಾ**

Explain the provisions of Cr.PC relating to prosecution for defamation. Marks : 15

ಮಾನಹಾನಿಯ ಅಭಿಯೋಜನೆಯ ಬಗ್ಗೆ ದಂಡಪ್ರಕ್ರಿಯಾ ಸಂಹಿತೆಯ ಉಪಬಂಧಗಳನ್ನು ವಿವರಿಸಿ.

(b) 'A' carried on the trade of auctioning vegetables in a private house. Those persons who brought vegetables for sale kept their carts on the public road in a manner causing obstruction to road traffic. The noise caused by auctioning the vegetable caused discomfort to the people living in the locality. The Executive Magistrate on receiving the information posses an order under S.133 of Cr.PC restraining 'A' from auctioning the vegetables. 'A' challenges order. Advise.

StudentBounty.com

StudentBounty.com

'A'ಯು ತನ್ನ ಸ್ವಂತ ಮನೆಯಲ್ಲಿ ತರಕಾರಿಯ ಬಹಿರಂಗ ಮಾರಾಟವನ್ನು ಮಾಡುತ್ತಿರುತ್ತಾನೆ. ಈ ಸಂದರ್ಭದಲ್ಲಿ ಆತನಲ್ಲಿಗೆ ಮಾರಾಟಕ್ಕಾಗಿ ತರಕಾರಿಗಳನ್ನು ತಂದವರು ತಮ್ಮ ಗಾಡಿಗಳನ್ನು ಆ ಮನೆಯ ಮುಂದೆ ಹಾದು ಹೋಗುವ ಸಾರ್ವಜನಿಕ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗುವಂತೆ ನಿಲ್ಲಿಸುತ್ತಾರೆ. ಅಲ್ಲದೆ ತರಕಾರಿಯ ಬಹಿರಂಗ ಮಾರಾಟದಿಂದ ಉಂಟಾದ ಗದ್ದಲದಿಂದ ಸುತ್ತಮುತ್ತ ಜೀವಿಸುವವರಿಗೂ ತೊಂದರೆಯಾಗುತ್ತದೆ. ಈ ಘಟನೆಗಳ ಮಾಹಿತಿ ಪಡೆದ ಸ್ಥಳೀಯ ಕಾರ್ಯಾಂಗ ದಂಡಾಧಿಕಾರಿ ದಂಡಾಪ್ರಕ್ರಿಯಾ ಸಂಹಿತೆಯ ಕಲಂ133ರ ಪ್ರಕಾರ 'A'ಯು ತರಕಾರಿಯನ್ನು ಬಹಿರಂಗ ಮಾರಾಟ ಮಾಡುವುದನ್ನು ನಿಷೇಧಿಸಿ ಆದೇಶವನ್ನು ಮಾಡುತ್ತಾರೆ. 'A' ಆದೇಶವನ್ನು ಪ್ರಶ್ನಿಸುತ್ತಾನೆ. ಸಲಹೆ ನೀಡಿ.

OR/**ಅಥವಾ**

The workers of 'A&B Company' are members of two unions. As a result of differences between the two unions there has been public disturbances. Now to stop the public disturbances the district Magistrate promulgates an order under S-144 of crpc. In said order of the District Magistrate prohibits assembly of 5 or more persons and shouting provocative slogans in certain specified areas. The order is to remain enforce for a period of 30 days. Is the order valid ? Give reasons. Marks : 5

A ಮತ್ತು B ಕಂಪೆನಿಯ ಕೆಲಸಗಾರರು ಎರಡು ಸಂಘಟನೆಯ ಸದಸ್ಯರಾಗಿದ್ದು ಆ ಸಂಘಟನೆಯೊಳಗಿನ ಮನಸ್ತಾಪದಿಂದಾಗಿಯು ಹಲವಾರು ಬಾರಿ ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ. ಈ ನಿಟ್ಟಿನಲ್ಲಿ ಜಿಲ್ಲಾ ಕಾರ್ಯಾಂಗ ದಂಡಾಧಿಕಾರಿಗಳು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 144ರ ಪ್ರಕಾರ ಒಂದು ಆದೇಶವನ್ನು ಮಾಡುತ್ತಾರೆ. ಸದ್ರಿ ಆದೇಶದಲ್ಲಿ ಜಿಲ್ಲಾ ಕಾರ್ಯಾಂಗ ದಂಡಾಧಿಕಾರಿಗಳು ಐದು ಮತ್ತು ಐದಕ್ಕಿಂತ ಹೆಚ್ಚು ಜನ ಸೇರುವುದನ್ನು ಮತ್ತು ಉದ್ರೇಕಕಾರಿ ಘೋಷಣೆಗಳನ್ನು ಕೂಗುವುದನ್ನು ಕೆಲವು ನಿರ್ದಿಷ್ಟ ಪ್ರದೇಶದಲ್ಲಿ ನಿಷೇಧಿಸುತ್ತಾರೆ. ಈ ಆದೇಶವು 30 ದಿವಸಗಳತನಕ ಊರ್ಜಿತದಲ್ಲಿ ಇರಬೇಕೆಂದೂ ಆದೇಶಿಸುತ್ತಾರೆ. ಆದೇಶವು ಕಾನೂನು ಸಮ್ಮತವಾಗಿದೆಯೇ ಎಂದು ಕಾರಣ ಸಹಿತ ತಿಳಿಸಿ.

## UNIT – V

Q. No. 5.(a) Discuss the formation and powers of Juvenile Justice Board.

ಬಾಲಅಪರಾಧಿ ನ್ಯಾಯ ಮಂಡಳಿಯ ರಚನೆ ಮತ್ತು ಅಧಿಕಾರವನ್ನು ಚರ್ಚಿಸಿ.

OR/**ಅಥವಾ**

State when a Court may release offenders after admonition and on probation of good conduct. Marks : 15

ಯಾವ ಸಂದರ್ಭಗಳಲ್ಲಿ ನ್ಯಾಯಾಲಯವು ಅಪರಾಧಿಗಳನ್ನು ಛಿಮಾರಿಯ ನಂತರ ಮತ್ತು ಸನ್ನಡತೆಯ ಪರಿವೀಕ್ಷಣೆ ಆಧಾರದಲ್ಲಿ ಬಿಡುಗಡೆ ಗೊಳಿಸಬಹುದು.

(b) Write short notes :

Constitution and powers of child welfare committee.

ಮಗುವಿನ ಕ್ಷೇಮ ಸಮಿತಿಯ ರಚನೆ ಮತ್ತು ಅಧಿಕಾರ.

OR/**ಅಥವಾ**

Procedure in case of offenders failing to observe the conditions of bond. Marks : 5

ಮುಚ್ಚಳಿಕೆಯ ಷರತ್ತುಗಳನ್ನು ಪಾಲಿಸಲು ಅಪರಾಧಿಯು ವಿಫಲನಾದಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ.

www.StudentBounty.com